

## ಕಿಲಾಸ (ಬಿಳುಪು ರೋಗ, ತೊನ್ನು ರೋಗ)

ವೈಟ್ ಪ್ಯಾಚ್ ಅಥವಾ ಲ್ಯುಕೋಡರ್ಮ ಎಂದೇ ಪ್ರಸಿದ್ಧಿಯಾದ ಈ ಕಾಯಿಲೆಗೆ ಆಯುರ್ವೇದದಲ್ಲಿ ಕಿಲಾಸ ಎಂದು ಕರೆಯುವರು.

* ಅರುಣ: ಇದರಲ್ಲಿ ವಾತ ದೋಷ ಪ್ರಧಾನವಾಗಿದ್ದು ಚರ್ಮದ ಮೆಲ್ಪದರ ಅತಿಯಾಗಿ ಒಣಗುವುದು ಹಾಗೂ ಅರುಣ ವರ್ಣಕ್ಕೆ ತಿರುಗುವುದು.

* ದಾರುಣ ಪಿತ್ತ ದೋಷ ಪ್ರಧಾನವಾಗಿದ್ದು ಉರಿಯುಕ್ತವಾಗಿ, ತಾಮ್ರ ವರ್ಣದಾಗಿರುತ್ತದೆ. ಅಲ್ಲದೆ ರೋಮನಾಶ ಆಗುತ್ತದೆ.

* ಬಿಳಿ ಬಣ್ಣದ ಚರ್ಮವ್ಯಾಧಿ ಹೆಚ್ಚು ನವೆಯುಳ್ಳದ್ದಾಗಿರುತ್ತದೆ.

ಈ ಕಾಯಿಲೆಯಲ್ಲಿ ಯಾವುದೇ ಸ್ರಾವ, ಅಥವಾ ಕ್ರಿಮಿಗಳ ಉತ್ಪತ್ತಿ ಕಂಡುಬರುವುದಿಲ್ಲ.

### ಚಿಕಿತ್ಸೆ

ಮಲಪು ರಸ, ಬಾವಂಚಿ ತೈಲ, ಬಾವಂಚಿ ಬೀಜ, ಚಿತ್ರಕ ಬೇರು ಪ್ರಯೋಗ, ಪಂಚಗವ್ಯ ಘೃತ ಮುಂತಾದವುಗಳನ್ನು ತಜ್ಞ ವೈದ್ಯರ ಸಲಹೆಯಂತೆ ತೆಗೆದುಕೊಳ್ಳುವುದು.

## ಸೋರಿಯಾಸಿಸ್

ಇದು ಕೂಡ ಇತ್ತೀಚೆಗೆ ಸಾಮಾನ್ಯವಾಗಿರುವ ಚರ್ಮ ಕಾಯಿಲೆಯಾಗಿದ್ದು, ಇದಕ್ಕೆ ಸೂಕ್ತವಾದ ಮತ್ತು ದೀರ್ಘ ಚಿಕಿತ್ಸೆಯನ್ನು ಆಯುರ್ವೇದದಲ್ಲಿ ಹೇಳಲಾಗಿದೆ. ಇದನ್ನು ಪ್ರಾರಂಭಿಕ ಹಂತಗಳಲ್ಲಿ ಕಡೆಗಣಿಸಿದರೆ ಮುಂದಿನ ದಿನಗಳಲ್ಲಿ ಭಯಂಕರ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು.

ಇದಕ್ಕೆ ಯಾವುದೇ ನಿರ್ದಿಷ್ಟವಾದ ಕಾರಣಗಳಿಲ್ಲ. ಹಾಗೆಂದು ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಅನುವಂಶಿಕವಾಗಿ ಮತ್ತು ದೇಹದಲ್ಲಿ ರೋಗ ನಿರೋಧಕ ಶಕ್ತಿ ಕುಗ್ಗಿ ಹೋಗಿ, ರಾಸಾಯನಿಕ ಕ್ರಿಯೆಗಳಲ್ಲಿ ಏರುಪೇರಾಗಿ ಈ ಕಾಯಿಲೆ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದು ಸಾಮಾನ್ಯವಾಗಿ ಕೈ ಕಾಲು, ಬೆರಳುಗಳ ಸಂಧಿಗಳಲ್ಲಿ, ಕಿವಿ ಹಿಂಭಾಗದಲ್ಲಿ, ಅಂಗೈ, ತಲೆಯಲ್ಲಿ, ಪಾದಗಳಲ್ಲಿ ಕಂಡುಬರುತ್ತದೆ. ಮೊದಲಿಗೆ ಕೆಂಪು ಬಣ್ಣದ ಗುಳ್ಳೆಗಳಾಗಿ, ವಿಪರೀತ ನವೆಯಿಂದ ಕೂಡಿರುತ್ತದೆ. ಸಾಮಾನ್ಯವಾಗಿ 15 ರಿಂದ 40 ವರ್ಷದವರಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಸಾಂಕ್ರಾಮಿಕ ರೋಗವಲ್ಲ.

ಇದಕ್ಕೂ ಆಯುರ್ವೇದದಲ್ಲಿ ಉತ್ತಮ ಔಷಧಿಗಳಿವೆ. ಶಮನ ಚಿಕಿತ್ಸೆ. ತ್ರಿಫಲಾ ಚೂರ್ಣ, ಹರಿದ್ರಾ ಖಾಂಡ, ಪಂಚತಿಕ್ತ ಘೃತ, ನೀಮ ತೈಲ ಮುಂತಾದವುಗಳನ್ನು ವೈದ್ಯರ ಸಲಹೆಯಂತೆ ತೆಗೆದುಕೊಳ್ಳಬೇಕು.

ಅತಿಯಾದ ಹುಳಿ, ಕಡ್ಲೆಹಿಟ್ಟು, ಅತಿ ಎಣ್ಣೆಯ ಪದಾರ್ಥಗಳ ಸೇವನೆ, ಮಧ್ಯಾಹ್ನ ಹೊತ್ತು ಮಲಗುವುದು, ಬಿಡಬೇಕು. ಕುಟಜ ತೈಲ ಪ್ರಯೋಗ, ಮೂಲಂಗಿ ಬೀಜದ ಪುಡಿಯನ್ನು ಮೊಸರಿನಲ್ಲಿ ಕಲಸಿ ಹಚ್ಚುವುದು ಕೂಡಾ ಪ್ರಯೋಜನಕಾರಿ.

ಶೋಧನ ಅಥವಾ ಪಂಚಕರ್ಮ ಚಿಕಿತ್ಸೆ ಪ್ರಯೋಜನಕಾರಿ. ಸ್ನೇಹನ, ಸ್ವೇದನ, ಷಷ್ಠಿಕ ಶಾಲಿ, ಪಿಂಡ ಸ್ವೇದ ಮುಂತಾದವುಗಳನ್ನು ದೋಷಾನುಸಾರವಾಗಿ ಮಾಡಬಹುದು. ಇವು ದೇಹದಲ್ಲಿನ ವಿಷಯುಕ್ತ ಅಂಶ ಹೋಗಲಾಡಿಸಿ ದೇಹ ನಿರೋಧಕ ಶಕ್ತಿಯನ್ನು ಹೆಚ್ಚು ಮಾಡುತ್ತವೆ.

ಯಾವುದೇ ಚರ್ಮವ್ಯಾಧಿಗಳಾಗಲಿ, ಮುಜುಗರಪಟ್ಟುಕೊಳ್ಳದೆ, ಸರಿಯಾದ ಸಮಯದಲ್ಲಿ ಔಷಧಿ ತೆಗೆದುಕೊಂಡರೆ ಸಂಪೂರ್ಣವಾಗಿ ಗುಣಪಡಿಸಬಹುದು. ಜೊತೆಗೆ ಯೋಗ, ಪ್ರಾಣಾಯಾಮ, ನಿಯಮಿತವಾಗಿ ಹಿತಮಿತವಾದ ಆಹಾರ ಸೇವನೆ, ಮಾನಸಿಕ ಒತ್ತಡ ಕಡಿಮೆ ಮಾಡಿಕೊಂಡರೆ ಆರೋಗ್ಯಪೂರ್ಣವಾಗಿ ಬಾಳಬಹುದು.

(ವೈದ್ಯರ ಮೊಬೈಲ್: 9916491041)


